ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ ಇವರು ಶೂನ್ಯವೇಳೆ ಪ್ರಸ್ತಾಪಿಸಿರುವ ವಿಷಯಗಳಿಗೆ ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖಾ ಸಚಿವರ ಉತ್ತರ.

*****

ಸೂಚನೆ:

ದಿನಾಂಕ:06.03.2026 ರಂದು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟಗೊಂಡ ದಾಖಲೆಯಲ್ಲಿ ಬೆಳೆದ ಜೋಳ ಬೆಳೆದ ರಾಯಚೂರು ರೈತರು' ಎಂಬ ಶೀರ್ಷಿಕೆಯಡಿ, ರಾಯಚೂರು ಜಿಲ್ಲೆಯಲ್ಲಿ ಕೆಲವು ಅಪರೂಪದ ಕೃಷಿಕರು ಬೆಳಕಿಗೆ ಬಂದಿದ್ದಾರೆ ಈ ಮಾದರಿ ರೈತರು ಕಂದಾಯ ಇಲಾಖೆಯ 'ಬೆಳೆ ದರ್ಶಕ' ಆಪ್‌ನಲ್ಲಿ ಬೆಳೆ ಸಮೀಕ್ಷೆ ವೇಳೆ ಹೊಲದಲ್ಲಿ ತೊಗರಿ, ಹತ್ತಿ, ಭತ್ತ ಇದ್ದರೂ ಜೋಳವೆಂದು ನಮೂದಿಸಿದ್ದಾರೆ. ಜಮೀನಿನಲ್ಲಿ ಯಾವುದೇ ಬೆಳೆ ಇಲ್ಲದಿದ್ದರೂ ಜೋಳ ಬೆಳೆದಿದ್ದಾರೆ ! ಮತ್ತೊಂದು ಸೋಜಿಗವೆಂದರೆ, ಬೇರೆ ತಾಲ್ಲೂಕಿನ ಜಮೀನನ್ನು ಸಿಂಧನೂರು ತಾಲ್ಲೂಕಿಗೆ ಹೊತ್ತು ತಂದಿದ್ದಾರೆ.

ರಾಯಚೂರು ಜಿಲ್ಲೆಯಲ್ಲಿ 2025-26ನೇ ಸಾಲಿನಲ್ಲಿ ಹಿಂಗಾರು & ಮುಂಗಾರು ಹಂಗಾಮಿನಲ್ಲಿ ಒಟ್ಟು 15.26 ಲಕ್ಷ ಕ್ವಿಂಟಾಲ್ ಜೋಳ ಮಾರಾಟಕ್ಕೆ ನೋಂದಣಿ ಮಾಡಲಾಗಿದೆ. ಸಿಂಧನೂರು ತಾಲ್ಲೂಕು ಒಂದರಲ್ಲೇ 16,430 ರೈತರು 8.72 ಲಕ್ಷ ಕ್ವಿಂಟಾಲ್ ಜೋಳ ಮಾರಾಟಕ್ಕೆ ನೋಂದಣಿ ಮಾಡಿಸಿಕೊಂಡಿರುವುದೇ ಅನುಮಾನದ ಮೂಲವಾಗಿದೆ ಎಂದು ವರದಿಯಾಗಿದೆ.

ಸಿಂಧನೂರು ತಾಲ್ಲೂಕಿನ ಖರೀದಿ ಕೇಂದ್ರಗಳಲ್ಲಿ ದೇವದುರ್ಗ, ಸಿರವಾರ, ಮಸ್ಕಿ, ಮಾನ್ವಿ ರಾಯಚೂರು ತಾಲ್ಲೂಕುಗಳಿಂದ ವಲಸೆ ಬಂದ ಖದೀಮರು ಆಯ್ಕೆ ಖರೀದಿ ಕೇಂದ್ರಗಳಲ್ಲಿ ಜೋಳ ಮಾರಾಟಕ್ಕೆ ಹೆಸರು ನೋಂದಾಯಿಸಿದ್ದಾರೆ. ಅಚ್ಚರಿಯ ಸಂಗತಿಯೆಂದರೆ ಕೆಲವು ತಾಲ್ಲೂಕುಗಳಲ್ಲಿ ಜೋಳ ಬೆಳೆ ಪ್ರದೇಶ ಕಡಿಮೆಯಿದ್ದರೂ ಅಪಾರ ಫಸಲು ಮಾರಾಟಕ್ಕೆ ಸಾವಿರಾರು ರೈತರು ಹೆಸರು ನೋಂದಾಯಿಸಿದ್ದಾರೆ. ಇದರಿಂದ ನೈಜ ರೈತರು ಸಂಕಷ್ಟಕ್ಕೆ ಸಿಲುಕುವಂತಾಗಿದೆ. ಬೆಳೆ ನೋಂದಣಿ ಪ್ರಕ್ರಿಯೆಯನ್ನು ನಿಗದಿತ ಸ್ಥಳದಲ್ಲಿ ಮಾಡದೇ ನಕಲಿ ರೈತರು ಇದ್ದಲ್ಲಿಗೆ ಲ್ಯಾಪ್‌ಟಾಪ್‌ನೊಂದಿಗೆ ತೆರಳಿ - ನೋಂದಣಿ ಮಾಡಿಕೊಳ್ಳಲಾಗಿದೆ. ಈ ಬಗ್ಗೆಯೂ ತನಿಖೆ ನಡೆದರೆ ಖರೀದಿ ಕೇಂದ್ರದ ಅಧಿಕಾರಿಗಳ ತಲೆದಂಡವಾಗುವುದು ನಿಶ್ಚಿತ ಎಂಬ ಮಾತು ಕೇಳಿಬಂದಿದೆ ಎಂಬುದಾಗಿ ವರದಿಯಾಗಿರುವುದನ್ನು ಸದನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುವ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಉತ್ತರ:

2025-26 ನೇ ಸಾಲಿನಲ್ಲಿ ಮುಂಗಾರು ಮತ್ತು ಹಿಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸುವ ಪ್ರಕ್ರಿಯೆಯನ್ನು ಇ-ಆಡಳಿತ (e-Governance) ಇಲಾಖೆಯಿಂದ ಅಭಿವೃದ್ಧಿ ಪಡಿಸಿದ FRUITS - Farmer Registration & Unified Beneficiary Information System ತಂತ್ರಾಂಶದಿಂದ ನೀಡುವ ಮಾಹಿತಿಯನ್ನು ಆಧರಿಸಿ ಆಹಾರ ಇಲಾಖೆಯ FIST ತಂತ್ರಾಂಶದ ಮೂಲಕ ರೈತರು ನೋಂದಣಿ ಮತ್ತು ಖರೀದಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ. FRUITS ತಂತ್ರಾಂಶದಲ್ಲಿ ಜಮೀನು ಮತ್ತು ಬೆಳೆ ವಿವರಗಳನ್ನು ನಿರ್ವಹಿಸುವ ಕಾರ್ಯವನ್ನು ರಾಜ್ಯ ಕೃಷಿ ಇಲಾಖೆಯ ವತಿಯಿಂದ ಕಂದಾಯ ಇಲಾಖೆಯ ಸಹಯೋಗದೊಂದಿಗೆ ಕೈಗೊಳ್ಳಲಾಗುತ್ತಿದೆ.

2025-26ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತವನ್ನು ಭತ್ತ, ಬಿಳಿಜೋಳ, ರಾಗಿ ಮತ್ತು ಕಿರು ಸಿರಿಧಾನ್ಯಗಳನ್ನು ರಾಜ್ಯ ರೈತರಿಂದ ಖರೀದಿಸಲು ಖರೀದಿ ಏಜೆನ್ಸಿಯಾಗಿ ನೇಮಿಸಲಾಗಿದೆ. ಸದರಿ ಪ್ರಕ್ರಿಯೆಗೆ ಕೃಷಿ ಇಲಾಖೆಯಿಂದ ನೀಡಿರುವ FRUITS ID ಯನ್ನು ರೈತರಿಂದ ಪಡೆದು ಸದರಿ ತಂತ್ರಾಂಶದಲ್ಲಿ ಆಹಾರಧಾನ್ಯಗಳನ್ನು ನೀಡಲು ರೈತರು ಅರ್ಹರು ಎಂದು ಕಂಡು ಬಂದ ನಂತರವಷ್ಟೇ ಅಂತಹ ರೈತರನ್ನು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ನೋಂದಣಿ ಮಾಡಿಕೊಳ್ಳಲಾಗುತ್ತಿದೆ ಆದರೆ ರೈತರ ಜಮೀನು ಮತ್ತು ಬೆಳೆ ವಿವರಗಳನ್ನು ಮಾರ್ಪಾಡುಗಳನ್ನು ಮಾಡಲು ಖರೀದಿ ಏಜೆನ್ಸಿಗಾಗಲೀ ಅಥವಾ ಖರೀದಿ ಕೇಂದ್ರಕ್ಕಾಗಲೀ ಯಾವುದೇ ಅಧಿಕಾರ ಇರುವುದಿಲ್ಲ.

ರಾಯಚೂರು ಜಿಲ್ಲೆಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು, ರಾಯಚೂರು ರವರು ದಿನಾಂಕ: 05-03-2026 ರಂದು ಖರೀದಿ ಏಜೆನ್ಸಿಯಾದ KFCSC ಯ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ ಇವರಿಗೆ ಸಲ್ಲಿಸಿರುವ ವರದಿಯಲ್ಲಿ ಸಿಂಧನೂರು ತಾಲ್ಲೂಕಿನ ಮಾವಿನಮಡು ಗ್ರಾಮದ ಕೆಲವೊಂದು ರೈತರು 2025-26 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ತಮ್ಮ ಜಮೀನಿನಲ್ಲಿ ಬೇರೆ ಬೇರೆ ಬೆಳೆ ಬೆಳೆದಿದ್ದು ಬೆಳೆ ಸರ್ವೆಗೆ ನಿಯೋಜನೆಗೊಂಡ ಖಾಸಗಿ ಸಮೀಕ್ಷದಾರರು ಜೋಳದ ಬೆಳೆ ಬೆಳೆದಿರುವುದಾಗಿ ನಮೂದಿಸಿದ್ದು, ಆದರೆ ಪ್ರಸ್ತುತ ಸ್ಥಾನಿಕವಾಗಿ ನೋಡಲಾಗಿ ಸದರಿ ಜಮೀನುಗಳಲ್ಲಿ ಜೋಳದ ಬೆಳೆ ಬೆಳೆದಿರುವುದಿಲ್ಲ ಎಂದು ತಿಳಿಸಲಾಗಿದೆ.

ಸದರಿ 21 ರೈತರ ಎಫ್‌ಐಡಿ, ಹೆಸರು ಮತ್ತು ಸರ್ವೆ ನಂ. ಮಾಹಿತಿಯನ್ನು ಪಟ್ಟಿ ಮಾಡಿ ಸಲ್ಲಿಸಿದ್ದು, ಕಾರಣ 2025-26 ನೇ ಸಾಲಿನ ಮುಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಸದರಿ ಎಫ್‌ಐಡಿಗಳ ನೋಂದಣಿ ಬ್ಲಾಕ್ ಮಾಡಿ ಜೋಳ ಖರೀದಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲು ಕೋರಿರುತ್ತಾರೆ ಹಾಗೂ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಸಂಶಾಯಸ್ಪದವಾಗಿ ನೋಂದಣಿಯಾದ 2196 ಸರ್ವೆ ನಂ. ಗಳ ಪಟ್ಟಿಯನ್ನು ನೀಡಿ ಸದರಿ ಎಫ್‌ಐಡಿ ಗಳನ್ನು ಖರೀದಿ ತಂತ್ರಾಂಶದಲ್ಲಿ ತಾತ್ಕಾಲಿಕವಾಗಿ ಬ್ಲಾಕ್ ಮಾಡುವಂತೆ ಕೋರಿರುತ್ತಾರೆ.

ಜಿಲ್ಲಾಧಿಕಾರಿಗಳು, ರಾಯಚೂರು ರವರು ಕೋರಿರುವಂತೆ 1660 ರೈತರಿಗೆ ಸೇರಿದ 2196 ಸರ್ವೆ ನಂ. ಗಳನ್ನು ಹಾಗೂ ಮಾವಿನಮಡು ಗ್ರಾಮದಲ್ಲಿ ಗುರುತಿಸಿದ 21 FRUITS ID ಗಳನ್ನು FIST ತಂತ್ರಾಂಶದಲ್ಲಿ ಖರೀದಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲು National Informatics Centre (NIC) ಕೋರಲಾಗಿದೆ. ಈ ಬಗ್ಗೆ ಜಿಲ್ಲಾಡಳಿತ ಹಂತದಲ್ಲಿ ಸಂಪೂರ್ಣ ತನಿಖೆಯಾಗಿ ಸೂಕ್ತ ಶಿಫಾರಸ್ಸು ಮಾಡುವವರೆಗೂ ಸದರಿ ರೈತರಿಂದ ಖರೀದಿ ಪ್ರಕ್ರಿಯೆಯನ್ನು ಕೈಗೊಳ್ಳಲಾವುದಿಲ್ಲ. ಒಂದು ವೇಳೆ ಮುಂದಿನ ಈ ರೀತಿಯ ಪ್ರಕರಣಗಳು ಕಂಡು ಬಂದು ಜಿಲ್ಲಾಡಳಿತದಿಂದ ಶಿಫಾರಸು ಮಾಡಿದಲ್ಲಿ ಅಂತಹ ಪ್ರಕರಣಗಳನ್ನು ಸಹ ತಡೆಹಿಡಿಯಲು ಸೂಕ್ತ ವಹಿಸಲಾಗುವುದು.

ಸರ್ಕಾರದ ಆದೇಶ ಸಂಖ್ಯೆ:ಇ-ಆನಾಸ 106 ಆರ್‌ಪಿಆರ್ 2025 (ಭಾ-1) (1858839) ಬೆಂಗಳೂರು, ದಿನಾಂಕ:23.01.2026 ರ ಆದೇಶದಲ್ಲಿ 2025-26 ನೇ ಸಾಲಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಮುಂಗಾರು ಮತ್ತು ಹಿಂಗಾರು ಜೋಳ ಖರೀದಿಸಲು ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವನ್ನು ಖರೀದಿ ಏಜೆನ್ಸಿಯಾಗಿ ಹಾಗೂ ನಿಗಮದ ವತಿಯಿಂದ ನೇಮಿಸಲ್ಪಟ್ಟ ಉಪಏಜೆನ್ಸಿಗಳಾದ PACS/ TAPCMS/ FPO ಗಳನ್ನು ನೇಮಿಸಲಾಗಿದ್ದು ಇವುಗಳ ಮೂಲಕ ರೈತರಿಗೆ ಅನುಕೂಲವಾಗುವಂತೆ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿರುತ್ತದೆ.

...3

ನಿಗಮದ ವತಿಯಿಂದ ನೇಮಿಸಲ್ಪಟ್ಟ ಉಪಏಜೆನ್ಸಿಗಳಾದ PACS/TAPCMS/FPOಗಳ CEO ಗಳೊಂದಿಗೆ ಹಲವಾರು ಬಾರಿ ವಿಡಿಯೋ ಸಂವಾದದ ಮೂಲಕ ಹಾಗೂ ಕೇಂದ್ರ ಕಛೇರಿಯಲ್ಲಿ ದಿನಾಂಕ16.02.2026 ರಂದು ಸಭೆ ನಡೆಸಿ ರೈತರ ನೋಂದಣಿ ಕಾರ್ಯವನ್ನು ನಿಗದಿಪಡಿಸಿದ ಖರೀದಿ ಕೇಂದ್ರಗಳಲ್ಲಿ ಮಾತ್ರ ನಿರ್ವಹಿಸಲು ನಿರ್ದೇಶನ ನೀಡಲಾಗಿರುತ್ತದೆ. ಈ ಬಗ್ಗೆ ಆಗಿಂದಾಗ್ಗೆ, ನಿಗಮದ ಜಿಲ್ಲಾ ವ್ಯವಸ್ಥಾಪಕರುಗಳು ಖರೀದಿ ಕೇಂದ್ರಗಳಿಗೆ ತೆರಳಿ ವ್ಯವಸ್ಥಿತವಾಗಿ ನೋಂದಣಿ ಕಾರ್ಯ ನಡೆಯುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಸೂಚಿಸಲಾಗಿರುತ್ತದೆ. ತಂತ್ರಾಂಶದಲ್ಲಿ ಖರೀದಿ ಕೇಂದ್ರದ ಲಾಗಿನ್ ಅನ್ನು ಒಮ್ಮೆಗೆ ಒಂದು ಕಡೆ ಮಾತ್ರ ಲಾಗಿನ್ ಆಗಲು ಹಾಗೂ ಪ್ರತಿ ಬಾರಿ ಲಾಗಿನ್ ಆಗುವಾಗ OTP ಮುಖಾಂತರ ದೃಢೀಕರಿಸಿದ ನಂತರವೇ ಲಾಗಿನ್ ಆಗಲು ಸಾಧ್ಯವಿರುತ್ತದೆ ಹಾಗೂ ಲಾಗಿನ್ ಸಮಯವನ್ನು ಬೆಳಗ್ಗೆ 8:00 ರಿಂದ ಸಂಜೆ 6:00 ರವರೆಗೆ ಮಾತ್ರ ಬಳಸಲು ಅವಕಾಶ ಕಲ್ಪಿಸಲಾಗಿದೆ.

ಬೆಳೆ ನೋಂದಣಿ ಪ್ರಕ್ರಿಯೆಯನ್ನು ನಿಗಧಿತ ಖರೀದಿ ಕೇಂದ್ರದಲ್ಲಿ ಹೊರತುಪಡಿಸಿ ಇತರೆ ಸ್ಥಳಗಳಲ್ಲಿ ನಡೆಸಿರುವ ಬಗ್ಗೆ, ಈವರೆಗೂ ಯಾವುದೇ ಲಿಖಿತ ದೂರುಗಳು ಸ್ವೀಕೃತವಾಗಿರುವುದಿಲ್ಲ. ಒಂದು ವೇಳೆ ಈ ಬಗ್ಗೆ ನಿರ್ದಿಷ್ಟ ದೂರುಗಳು ಬಂದಲ್ಲಿ ಸಂಬಂಧಪಟ್ಟವರ ವಿರುದ್ಧ ಕ್ರಮಕೈಗೊಳ್ಳಲಾಗುವುದು.

ಕೃಷಿ ಇಲಾಖೆ ಮತ್ತು ಕಂದಾಯ ಇಲಾಖೆ ವತಿಯಿಂದ ಬೆಳೆ ಸಮೀಕ್ಷೆ ನಡೆಸಿ FID ಯಲ್ಲಿ ಜೋಳ ಬೆಳೆದಿದ್ದಾರೆ ಎಂದು ನಮೂದಿಸಿದ ರೈತರ FID ಸಂಖ್ಯೆ ಮಾತ್ರ ನೋಂದಣಿ ಲಾಗಿನ್ ನಲ್ಲಿ ನಮೂದಿಸಿ ನೋಂದಣಿ ಮಾಡಲು ಸಾಧ್ಯವಾಗುತ್ತದೆ. ಇದರಿಂದ ನೋಂದಣಿಯನ್ನು ಯಾವ ಸ್ಥಳದಲ್ಲಿ ಮಾಡಿದರೂ FRUITS ತಂತ್ರಾಂಶದಲ್ಲಿನ FID ಸಂಖ್ಯೆಗೆ ಮಾಹಿತಿ ಲಭ್ಯವಿದ್ದಲ್ಲಿ ಮಾತ್ರ ನೋಂದಾಯಿಸಲು ಸಾಧ್ಯವಾಗುತ್ತದೆ.

ಇ-ಆನಾಸ 39 ಆರ್‌ಪಿಆರ್ 2026

(ಕೆ.ಹೆಚ್. ಮುನಿಯಪ್ಪ)

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ

ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ

ಇಲಾಖಾ ಸಚಿವರು